ಬೆಕ್ಕು ಬುಟ್ಟಿಯಿಂದ ಹೊರ ಬಂತು. ಹಾಸಿಗೆ ಮೇಲೆ ಅಂಗಾತ ಬಿದ್ದುಕೊಂಡಿದ್ದ ಪುರುವನ್ನೊಮ್ಮೆ ನೋಡಿ 'ಮಿಯಾಂವ್' ಅಂತು. ಹೊರಗೆ ಮಳೆ. ಅದಕ್ಕೇ ಮನೆಯೊಳಗೆ ಕುಳಿತಿದೆಯೋ ಏನೋ? 'ಆಚೆ ಹೋಗಲ್ವೇನೋ?' ಕೇಳಿದ. ಅದು ಬಲಕ್ಕೆ ಎತ್ತಿ ಮುಖ ಬಳಚಿಕೊಳ್ಳುತ್ತಾ ಮತ್ತೊಮ್ಮೆ 'ಮಿಯಾಂವ್' ಅಂತು. ಎದ್ದು ಅಡುಗೆ ಮನೆಯಲ್ಲಿ ಹಾಲಿದೆಯಾ ನೋಡಿದ. ಗ್ಯಾಸ್ ಸ್ಟೌ ಮೇಲೆ ಸಣ್ಣ ಪಾತ್ರೆಯ ತಳದಲ್ಲಿ ಒಂದೆರಡು ಹನಿಯಷ್ಟು ಹಾಲಿತ್ತು. ಕಾಫಿ ಕುಡಿಯಬೇಕೆಂದೆನ್ನಿಸಿ, ಇರುವ ಒಂದು ಸ್ಪೂನ್ ಹಾಲನ್ನು ಬೆಕ್ಕಿಗೆ ಹಾಕಲಾ, ಕಾಫಿ ಮಾಡಲಾ ಯೋಚಿಸುತ್ತಾ ನಿಂತ. ಫ್ರಿಡ್ಜ್ ತೆಗೆದು ನೋಡಿದ. ಬೇರೆ ಹಾಲಿನ ಪ್ಯಾಕೆಟ್ ಕಾಣಲಿಲ್ಲ. ಫ್ರಿಡ್ಜು ಖಾಲಿ ಹೊಡೆಯುತ್ತಿತ್ತು.

ಮತ್ತೆ ಬೆಡ್‌ರೂಮಿಗೆ ಬಂದ. ಬೆಕ್ಕು ಬಾಲ ಅಲ್ಲಾಡಿಸುತ್ತಾ, ಕೋಣೆಗೆ ಸುತ್ತು ಬರುತ್ತಿತ್ತು. 'ಸುಜಾತಾ ಎಲ್ಲಿ ಹೋದಳೋ?' ಕೇಳಿದ. ಬೆಕ್ಕು ಒಂದು ಕ್ಷಣದ ನಂತರ 'ಮಿಯಾಂವ್' ಅಂತು. ಹೊರಗೆ ಆಕಾಶ ಆರ್ಭಟಿಸಿ, ನೆಲವನ್ನೊಮ್ಮೆ ನಡುಗಿಸಿತು. ಕಿಟಕಿಯ ಪರದೆ ಸರಿಸಿ, ರಸ್ತೆ ನಿಟ್ಟಿಸಲು ಪ್ರಯತ್ನಿಸಿದ. ಗಾಜಿನಾಚೆ ಪ್ರಪಂಚ ತೊಯ್ದು

